ನೋಡಿಕೊಳ್ಳುವುದು ನಡೆದಿತ್ತು. ಅವಳ ಅಗಲವಾದ ಕಣ್ಣುಗಳು ಮತ್ತು ಉದ್ದನೆಯ ಕೂದಲು ರಾಮ್ ಲಾಲನನ್ನು ಬಹಳವಾಗಿ ಆಕರ್ಷಿಸಿದ್ದವು. ಅಪ್ಪ ಅಮ್ಮ ಮದುವೆಯಾಗಲು ತನ್ನನ್ನು ಬಲವಂತ ಪಡಿಸುತ್ತಿದ್ದದ್ದು ನೆನಪಿಗಾಗಿ ಪುಳಕಗೊಂಡಿದ್ದ. ಇಬ್ಬರ ನೋಟಗಳು ನಗುವಿನ ವಿನಿಮಯದ ಹಂತಕ್ಕೆ ತಲುಪಿದ್ದವು. ಊರಿನಲ್ಲಿ ಮನೆಯ ಮಾಳಿಗೆಯ ಮೇಲೆ ಮಲಗಿ ಚಂದ್ರ, ನಕ್ಷತ್ರಗಳನ್ನು ನೋಡಿದಾಗ ಉಂಟಾಗುತ್ತಿದ್ದ ಹೇಳಿಕೊಳ್ಳಲಾರದಂಥ ಖುಷಿಯ ಭಾವನೆ ಅವಳನ್ನು ನೋಡಿದಾಗ ಅವನಲ್ಲಿ ಮರುಕಳಿಸುತ್ತಿತ್ತು! ಹರೆಯದ ಪರಿಕರಗಳು ರಾಮ್ ಲಾಲನಲ್ಲೂ ಪ್ರೀತಿಯ ಕುಸುರಿ ಕೆಲಸವನ್ನು ಪ್ರಾರಂಭಿಸಿದ್ದವು. ಪ್ರೀತಿ ಪ್ರೇಮಗಳಿಗೆ ಬಡತನ, ಶ್ರೀಮಂತಿಕೆಯೆಂಬ ಭೇದ ಭಾವ ಇರುವುದಿಲ್ಲವಲ್ಲ. ಅದರಲ್ಲೂ ನಿಷ್ಕಲ್ಮಶ ಪ್ರೀತಿ, ಪ್ರೇಮಗಳು ಜಾಸ್ತಿ ಉಸಿರಾಡುವುದು ಬಡತನದಲ್ಲಿಯೇ ಎಂಬುದು ಸಾಬೀತಾಗಿದೆ ಕೂಡ. ಒಮ್ಮೆ ಅವಳೊಂದಿಗೆ ಮಾತನಾಡಬೇಕೆಂಬ ಆಸೆ ಉಂಟಾದರೂ ಒಂದು ರೀತಿಯ ಭಯ ರಾಮ್ ಲಾಲನಿಗೆ.

> ಇಂಥ ಭೀಕರ ದೃಶ್ಯಗಳನ್ನು ನೋಡಬೇಕಾಗಬಹುದೆಂದು ಜನ ಭಾವಿಸಿರಲಿಲ್ಲ. ಇವೆಲ್ಲವನ್ನೂ ನೋಡುತ್ತಿದ್ದ ರಾಮ್ ಲಾಲನಿಗೂ ಏನಾದರಾಗಲೀ ತಮ್ಮನೊಡನೆ ಊರಿಗೆ ಹೋಗಿಬಿಡಬೇಕೆನ್ನುವ ಬಲವಾದ ಹಂಬಲ ಹುಟ್ಟಿಕೊಂಡಿತ್ತು.

ಈಗ್ಗೆ ಇಪ್ಪತ್ತು ದಿನಗಳ ಹಿಂದೆ ಬಸ್‌ಸ್ಟಾಪಿನಲ್ಲಿ ಇಬ್ಬರೂ ನಿಂತಿದ್ದರು. ಮಾಮೂಲಿಯಾಗಿ ನಗು ವಿನಿಮಯವಾಗಿತ್ತು. ಆ ಟೈಮಿನ ಮಾಮೂಲಿ ಬಸ್ ತುಂಬಾ ರಶ್ ಆಗಿದ್ದರಿಂದ ಇಬ್ಬರೂ ಹತ್ತಲು ಸಾಧ್ಯವಾಗಿರಲಿಲ್ಲ. ಅವನಿಗೆ ಥಟ್ಟನೆ ಒಂದು ಉಪಾಯ ಹೊಳೆದಿತ್ತು. ಮುಂದೆ ಬಂದು ನಿಂತ ಆಟೊವನ್ನು ತನ್ನ ಫ್ಯಾಕ್ಟರಿಯ ಜಾಗಕ್ಕೆ ಬಾಡಿಗೆ ಮಾತನಾಡಿದ್ದ. ''ಬರ್ತೀರಾ ನಿಮ್ಮ ಫ್ಯಾಕ್ಟರಿಯ ಮುಂದೆ ಬಿಟ್ಟು ಹೋಗ್ತೀನಿ...'' ಎಂದು ಅಲ್ಲೇ ನಿಂತಿದ್ದ ಅವಳನ್ನು ಕರೆದಿದ್ದ. ಅವಳು ಕ್ಷಣ ಯೋಚನೆ ಮಾಡಿದವಳು ಬಂದು ಆಟೊ ಹತ್ತಿದ್ದಳು. ಅವನ ಎದೆ ಉಲ್ಲಾಸದಿಂದ ಜೋರಾಗಿ ಹೊಡೆದುಕೊಂಡಿತ್ತು. ಬಹುಶಃ ಅವಳಲ್ಲೂ ಅದೇ ರೀತಿ ಆಗಿದ್ದಿರಬಹುದು, ಸಂಕೋಚದಿಂದ ಮುಖ ಕೆಂಪೇರಿತ್ತು. ''ನೀವೂ ಬಿಹಾರಿಗಳಾ...'' ಏನು ಮಾತನಾಡಬೇಕೆಂದು ತೋಚದೆ ಕೇಳಿದ್ದ. ''ಹೌದು, ನಿಮಗೆ ಹೇಗೆ ತಿಳಿಯಿತು'' ಅವನ ಕಡೆ ನೋಡದೆಯೇ ಕೇಳಿದ್ದಳು. ''ಆಂ, ಈ ಏರಿಯಾದಲ್ಲಿ ಬಿಹಾರದವರು ಮತ್ತು ಉತ್ತರ ಪ್ರದೇಶದವರೆ ಹೆಚ್ಚು ಮಂದಿ ತುಂಬಿದ್ದಾರೆ. ಅದೂ ಅಲ್ಲದೆ ನಿಮ್ಮನ್ನು ನೋಡಿದರೆ ಬಿಹಾರಿ ಹುಡುಗಿ ಎಂದು ಥಟ್ಟನೆ ಹೇಳಬಹುದು...'' ಅವನ ಮಾತು ಅವಳಿಗೆ ಬಹಳ ಹಿಡಿಸಿದಂತೆ ಅವನ ಮುಖ ನೋಡಿದ್ದಳು.

''ನಿಮ್ಮ ಹೆಸರೇನು?'' ಎಂದು ಕೇಳಿದ ರಾಮ್ ಲಾಲನಲ್ಲಿ ತುಸು ಧೈರ್ಯ ಉಸಿರಾಡತೊಡಗಿತ್ತು. ''ಆನಂದ್ ವಿಹಾರಿ... ಎಲ್ಲರೂ 'ಆನಂದಿ' ಎಂದು ಕರೆಯುತ್ತಾರೆ. ನೀವೂ ಹಾಗೆ ಕರೆಯಬಹುದು...'' ಅವಳ ಮಾತಿನಲ್ಲಿಯೇ ಅವನ ಮೇಲೆ ಅವಳಿಗೆ ವಿಶೇಷವಾದ ವಿಶ್ವಾಸ ಮೂಡಿರುವುದು ವ್ಯಕ್ತವಾಗಿತ್ತು. ''ತಮಾಷೆ ಮಾಡ್ತೀರಾ, ಅದು ಈ ಏರಿಯಾದ ಹೆಸರು...'' ನಕ್ಕಿದ್ದನವನು.

''ಅಯ್ಯೋ ತಮಾಷೆ ಎಂಥಾದ್ದು. ನಮ್ಮಪ್ಪ, ಅಮ್ಮ ಊರಿನಿಂದ ಇಲ್ಲಿಗೆ ಬಂದಾಗ ಅಮ್ಮ